ಶ್ರೀ ಎನ್. ಸಂಪಂಗಿ: ಒಂದು ಕ್ಲಾರಿಫಿಕೇಷನ್,

ಅಧ್ಯಕ್ಷರು: ನಾನು ನಿಮ್ಮ ಗಮನಕ್ಕೆ ರೂಲ್ಸ್ ಅನ್ನು ಓದಿ ಬಿಡುತ್ತೇನೆ.

ಶ್ರೀ ಎನ್. ಸಂಪಂಗಿ: ಅಧ್ಯಕ್ಷರೆ, ಆಯಿತು, ಕ್ರೀಡಾಪಟುಗಳ ಬಗ್ಗೆ ತಮಗೆ ಎಷ್ಟು ಕಾಳಜಿ ಇದೆ ಎಂಬುದು ಗೊತ್ತಾಗುತ್ತದೆ ಬಿಡಿ.

ಅಧ್ಯಕ್ಷರು: ಈ ತರಹ ನೀವು ಹೇಳುವುದಾದರೆ, ಈ ರೂಲ್ಸ್ ಅನ್ನು ತೆಗೆದು ಹಾಕಿ, you being and Advocate ಇದು ಏನು ಹೇಳುತ್ತದೆಂದು ಸ್ವಲ್ಪ ಓದಿ, ಬೇರೆಯವರಾಗಿದ್ದರೆ ನಾನು ಒಪ್ಪುತ್ತಿದೆ, ತಾವು ಒಬ್ಬ ವಕೀಲರಾಗಿ ಈ ರೀತಿ ಮಾತನಾಡಬಾರದು, it is too bad.

2. ವಿಷಯ: ಹೇಮಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಶ್ರೀರಾಮ ದೇವರ ಅಣೆಕಟ್ಟೆ ನಾಲೆಯ ಕಳಪೆ ಕಾಮಗಾರಿಯ ಬಗ್ಗೆ

ಶ್ರೀ ಟಿ.ಬಿ. ಜಯಚಂದ್ರ (ಸಿರಾ): ಸನ್ಮಾನ್ಯ ಅಧ್ಯಕ್ಷರೆ, ಹೇಮಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಶ್ರೀರಾಮ ದೇವರ ಅಣೆಕಟ್ಟೆ ನಾಲೆಯ ಕಳಪೆ ಕಾಮಗಾರಿ ಹಾಗೂ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು): ಹೇಮಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಶ್ರೀರಾಮದೇವರ ಅಣೆಕಟ್ಟೆ ನಾಲೆಯು 136 ವರ್ಷಗಳ ಹಿಂದೆ ನಿರ್ಮಿಸಿದ್ದ ನಾಲೆಯಾಗಿದ್ದು, ಇದು ಹೊಳೆನರಸೀಪುರ ತಾಲ್ಲೂಕು ಕಟ್ಟೇಬೆಳಗುಲಿ ಗ್ರಾಮದ ಹತ್ತಿರ ಇರುತ್ತದೆ. ಈ ಅಣೆಕಟ್ಟೆಯಿಂದ 2 ನಾಲೆಗಳು ಹೊರಡುತ್ತಿದ್ದು, ಉತ್ತರ ನಾಳೆ 108 ಕಿ.ಮೀ. ಉದ್ದವಿದ್ದು, ಇದರಿಂದ 3830 ಹೆ. ಮತ್ತು ದಕ್ಷಿಣ ನಾಲೆ 44 ಕಿ.ಮೀ. ಉದ್ದವಿದ್ದು, ಇದರ ವ್ಯಾಪ್ತಿಯು 892 ಹೆ. ಅಂದರೆ ಒಟ್ಟು 4722 ಹೆ. ಪ್ರದೇಶಕ್ಕೆ ನೀರು ಒದಗಿಸಲು ಯೋಜಿಸಿದ ಅಣೆಕಟ್ಟೆ ನಾಲೆಯಾಗಿರುತ್ತದೆ.

ಈ ನಾಲೆಗಳು ಹಳೆಯ ಲೈನಿಂಗ್ ರಹಿತ ನಾಲೆಯಾದ ಕಾರಣ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿದ್ದು, ಇದರಿಂದ ನಾಲೆಗಳಲ್ಲಿ ಹರಿಯುವ ನೀರಿನ ವೇಗ ಕಡಿಮೆಯಾಗಿ ಸರಿಯಾದ ಸಮಯಕ್ಕೆ ಅಂತಿಮ ಭಾಗದ ಅಚ್ಚುಕಟ್ಟಿಗೆ ಅಗತ್ಯ ನೀರು ಸರಬರಾಜ ಆಗದ ಕಾರಣ ಸುಮಾರು 947 ಹೆ. ಬಾಧಿತ ಅಚ್ಚುಕಟ್ಟು ಪ್ರದೇಶವಾಗಿತ್ತು. ಈ ಕಾರಣ ಈ ನಾಲೆಗಳ ಪೈಕಿ ಉತ್ತರ ನಾಲೆ 0 ರಿಂದ 75 ಕಿ.ಮೀ. ವರೆಗೆ ದಿನಾಂಕ 31–5–2000ರಲ್ಲಿ ರೂ. 33.00

ಕೋಟಿ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯಾಗಿದ್ದು, ಈ ನಾಲೆಯಲ್ಲಿ ಎರಡು ಅವಧಿಗೆ ನೀರನ್ನು ಹರಿಸುತ್ತಿದ್ದ ಕಾರಣ ಸುಮಾರು ರೂ. 8.65 ಕೋಟಿಗಳ ಕೆಲಸ ಮಾತ್ರ ಕೈಗೊಳ್ಳಲು ಸಾಧ್ಯವಾಗಿತ್ತು.

ತದನಂತರ, ಈ ನಾಲೆಗಳನ್ನು ಸಂಪೂರ್ಣವಾಗಿ ಆಧುನೀಕರಣ ಗೊಳಿಸಲು ಯೋಜಿಸಿ 2006–07ನೇ ಸಾಲಿನಲ್ಲಿ ಈ ಹಿಂದೆ ತೆಗೆದುಕೊಂಡಿರುವ ಕೆಲವು ಕಾಮಗಾರಿಗಳನ್ನು ಹೊರತುಪಡಿಸಿ, ಉತ್ತರ ನಾಲೆ 0 ರಿಂದ 75 ಕಿ.ಮೀ. ಕಾಮಗಾರಿಗಳಿಗೆ ರೂ. 70.90 ಕೋಟಿ, 75 ಕಿ.ಮೀ ನಿಂದ 108 ಕಿ.ಮೀ. ಕಾಮಗಾರಿಗೆ ರೂ. 38.00 ಕೋಟಿ ಹಾಗೂ ದಕ್ಷಿಣ ನಾಲೆ 0 ರಿಂದ 44 ಕಿ.ಮೀ. ಕಾಮಗಾರಿಗಳಿಗೆ ರೂ. 31.00 ಕೋಟಿಗಳಿಗೆ ಒಟ್ಟಾರೆ ರೂ. 139.90 ಕೋಟಿಗಳಿಗೆ ಆಡಳಿತಾತ್ಮಕ ಅನುಮೊದನೆಯಾಗಿದ್ದು, ಈ ಅಂದಾಜಿನಲ್ಲಿ ಕೊರೆದಿರುವ ಭಾಗವನ್ನು ಸರಿಪಡಿಸಿ ಪೂರ್ಣ ಸೆಕ್ಷನ್‌ಗೆ ನಾಲೆಯನ್ನು ಲೈನಿಂಗ್ ಮಾಡಲು ಉದ್ದೇಶಿಸಿ, ತಾಂತ್ರಿಕ ಉಪಸಮಿತಿ ಹಾಗೂ ಮಂಡಳಿಯ ಅನುಮೋದನೆಯೊಂದಿಗೆ ಹೊಸದಾಗಿ ಕಾಮಗಾರಿ ತೆಗೆದುಕೊಳ್ಳಲು ಉದ್ದೇಶಿಸಿ ಉತ್ತರ ನಾಲೆಯ ಕಿ.ಮೀ. 75 ರಿಂದ 108 ಕಿ.ಮೀ. ವರೆಗೆ ಹಾಗೂ ದಕ್ಷಿಣ ನಾಲೆ 0 ರಿಂದ 44 ಕಿ.ಮೀ. ವರೆಗಿನ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ 28–2–2007ರಲ್ಲಿ ನೀಡಲಾಗಿದೆ.

ತದನಂತರ, ಈ ನಾಲೆಯನ್ನು ಈ ರೀತಿ ಮಾಡುವುದರಿಂದ ನೀರಿನ ವೇತ ಕಡಿಮೆಯಾಗಿ ಕಾಮಗಾರಿಯ ಉದ್ದೇಶ ಸಫಲವಾಗುವುದಿಲ್ಲವೆಂದು, ಅದರ ಕ್ಷಮತೆಯನ್ನು ಉತ್ತಮಗೊಳಿಸುವ ಹಿನ್ನೆಲೆಯಲ್ಲಿ ನಾಲೆಯನ್ನು ಮರು ವಿನ್ಯಾಸಗೊಳಿಸಿ, ರಸ್ತೆಯನ್ನು ಅಭಿವೃದ್ಧಿಪಡಿಸಿ, ಉಪಯೋಗವಿಲ್ಲದ ಮಣ್ಣು ಮತ್ತು ಹೂಳು ತೆಗೆದು, ಉತ್ತಮ ಗುಣಮಟ್ಟದ ಗ್ರಾವೆಲ್ ಹಾಕಿ, ಅಗತ್ಯವಿರುವ ಕಡೆ ಸ್ಟೀಲ್ ಅಳವಡಿಸಿ ಹಾಗೂ ಪ್ರಚಲಿತ ಎಸ್.ಆರ್. ದರಗಳಿಗೆ ಹಾಗೂ ಆ ಸಂದರ್ಭದಲ್ಲಿ ಉಪಯೋಗಿಸುತ್ತಿದ್ದ ಸ್ಟೀಲ್ ಮತ್ತು ಸಿಮೆಂಟ್ ದರಗಳನ್ನು ಪರಿಗಣಿಸಿ ಸಿ.ಡಿ.ಗಳನ್ನು ಪುನರ್ ನಿರ್ಮಿಸಿ ಪೇವರ್ ಮುಖಾಂತರ ಲೈನಿಂಗ್ ಮಾಡಲು ಪರಿಷ್ಕರಿಸಿ ಸಲ್ಲಿಸಿದ್ದ ಅಂದಾಜುಗಳನ್ನು ತಾಂತ್ರಿಕ ಸಮಿತಿ ಹಾಗೂ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಅದರಂತೆ, ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯನ್ನು ಉತ್ತರ ನಾಲೆ 0.00 ರಿಂದ 75.00 ಕಿ.ಮೀ. ಅಂದಾಜಿಗೆ ರೂ. 108.92 ಕೋಟಿಗಳಿಗೆ ಸರ್ಕಾರದ ಆದೇಶ

ಸಂಖ್ಯೆ: ಜಸಂಇ 21 ಎನ್‌ಎಹೆಚ್‌ಪಿ 2007, ದಿನಾಂಕ 5–6–2007, 75.00 ರಿಂದ 108.00 ಕಿ.ಮೀ. ಗಳಿಗೆ ರೂ. 51.65 ಕೋಟಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 19 ಎನ್‌ಹೆಚ್‌ಪಿ 2007, ದಿನಾಂಕ 5–6–2007 ಹಾಗೂ ದಕ್ಷಿಣ ನಾಲೆಯ 0.00 ರಿಂದ 44.00 ಕಿ.ಮೀ. ಗೆ ರೂ. 52.27 ಕೋಟಿಗೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 20 ಎನ್‌ಹೆಚ್‌ಪಿ 2007, ದಿನಾಂಕ 5–6–2007ರಂದು ಆಡಳಿತಾತ್ಮಕ ಅನುಮೋದನೆಯಾಗಿದ್ದು, ಪರಿಷ್ಕೃತ ಅಂದಾಜು ಒಟ್ಟು ಮೊತ್ತ ರೂ. 212.84 ಕೋಟಿಗಳಾಗಿರುತ್ತದೆ.

ಈ ರೀತಿ ಅನುಮೋದನೆಯಾದ ಮೊತ್ತಕ್ಕೆ ಮುಖ್ಯ ಇಂಜಿನಿಯರ್‌ರವರು ತಾಂತ್ರಿಕ ಮಂಜೂರಾತಿ ನೀಡಿ ಟೆಂಡರ್ ಮುಖಾಂತರ 13 ಪ್ಯಾಕೇಜ್‌ಗಳಲ್ಲಿ updated cost ಮೇಲೆ ಶೇ. 5% ಹೆಚ್ಚುವರಿಯಂತೆ ರೂ. 271.52 ಕೋಟಿಗಳ ಮೊತ್ತದಲ್ಲಿ ಕಾಮಗಾರಿಗಳನ್ನು ಕೈಗೊಂಡಿದ್ದು, ಕಾಮಗಾರಿಯು ಬಹುತೇಕ ಪೂರ್ಣಗೊಂಡಿರುತ್ತದೆ.

ಕಾಮಗಾರಿಗಳನ್ನು ನಿರ್ವಹಿಸುವಾಗ ಗುಣಮಟ್ಟವನ್ನು ಕಾಯ್ದುಕೊಳ್ಳುವ ಸಲುವಾಗಿ ಇಲಾಖೆಯ ಗುಣ ನಿಯಂತ್ರಣ ಶಾಖೆ ಜೊತೆಗೆ third partyರವರಿಂದ ಗುಣಮಟ್ಟವನ್ನು ಪರೀಕ್ಷಿಸಿ ಅದರ ವರದಿಯನ್ವಯ ಹಣ ಪಾವತಿ ಮಾಡಲಾಗಿದೆ.

2) ವಿಷಯ: ಹೇಮಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಶ್ರೀರಾಮದೇವರ ಅಣೆಕಟ್ಟೆ ನಾಲೆಯ ಬಗ್ಗೆ

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, 136 ವರ್ಷಗಳ ಹಿಂದೆ ನಿರ್ಮಿಸಿದಂತ ನಾಲೆಗೆ, ಅದರಲ್ಲೂ 4722 ಹೆಕ್ಟೇರಿಗೆ ನೀರು ಒದಗಿಸುವ ಯೋಜನೆಗೆ 2006–07ರಲ್ಲಿ ಸುಮಾರು 28–7–2007ರಲ್ಲಿ ತಾಂತ್ರಿಕ ಅನುಮೋದೆಯನ್ನು ಪಡೆದು 139 ಕೋಟಿಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದ್ದೀರಿ. ಕೇವಲ 4 ತಿಂಗಳಿಗೆ ಅದನ್ನು ಬದಲಾವಣೆ ಮಾಡಿ 212.84 ಕೋಟಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದ್ದೀರಿ. ನಾನು ಕೇಳುವುದೇನೆಂದರೆ, 4 ತಿಂಗಳಲ್ಲಿ ಇಷ್ಟೊಂದು ಹೈಕ್ ಆಗುವುದಕ್ಕೆ ಕಾರಣವೇನು? ಎರಡನೇಯದಾಗಿ ನೀವೇನು ಟೆಂಡರ್ ಕೊಟ್ಟಿದ್ದೀರಿ, ಅದು ಆಗಬೇಕಾದಾಗ extra financial investment ಎಷ್ಟಾಗುತ್ತದೆಂದರೆ, ಸುಮಾರು 75 ಕೋಟಿಯಾಗುತ್ತದೆ, 13 ಪ್ಯಾಕೇಜ್ ಟೆಂಡರ್ ಕರೆದಿದ್ದೇವೆಂದು ಹೇಳಿದ್ದೀರಿ.

ಹೆಚ್ಚುವರಿ 5% ಇಲ್ಲಿ ಕೊಟ್ಟಿದ್ದೀರಿ. ಎಷ್ಟು ಜನ ಗುತ್ತಿಗೆದಾರರು ಇದಕ್ಕೆ ಗುತ್ತಿಗೆ ಮಾಡುತ್ತಿದ್ದಾರೆ? ಇವತ್ತು ಬಹಳ ವರ್ಷಗಳಿಂದ ಆಗಬೇಕಾಗಿದ್ದ ಕೆಲಸವನ್ನು ಮಾಡಿದ್ದೀರಿ, ಬಹಳ ಸಂತೋಷ. ನೀವು ಈ ಸಾಲಿನ ಬಜೆಟ್‌ನಲ್ಲೂ ಈ ರೀತಿಯ modernization schemeಗಳನ್ನು, ಕಾಮಗಾರಿಗಳನ್ನು ಮಾಡಬೇಕೆಂದು ಹೇಳಿದ್ದೀರಿ. ಏಕೆಂದರೆ ನಾನು ಮಾಹಿತಿ ಇಲ್ಲದೆಯೆ ಕೇಳುವುದಿಲ್ಲ, ಮಾಹಿತಿಯನ್ನು ಇಟ್ಟುಕೊಂಡೇ ನಾನು ಕೇಳುತ್ತಿರುವುದು. ಆದರೆ, ಇಲ್ಲಿ ಅನುಮಾನ ಬರುವುದಕ್ಕೆ ಕಾರಣವಾಗಿರತಕ್ಕದ್ದು, ಕೇವಲ 4 ತಿಂಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು ಇಷ್ಟು escalate ಆಗುವುದಕ್ಕೆ ಕಾರಣವೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, 136 ವರ್ಷದ ಹಿಂದಿನ ಈ ಅಣೆಕಟ್ಟು. ಅಲ್ಲಿಯ ರೈತರಿಗೆ ಯಾವುದೇ ರೀತಿಯ ನೀರನ್ನು ಹರಿಸಲು ಸಾಧ್ಯವಿಲ್ಲದೆಯೆ ಹಗಲು ರಾತ್ರಿ ರೈತರು ನೀರಿಗಾಗಿ ಕಾಯುವಂಥ ಪರಿಸ್ಥಿತಿ ಇತ್ತು. ಅಲ್ಲಿಯ ರೈತರು ಬಹಳಷ್ಟು ಒತ್ತಡವನ್ನು, ಹೋರಾಟವನ್ನು ಮಾಡಿದ ಹಿನ್ನೆಲೆಯಲ್ಲಿ ಮೊಟ್ಟಮೊದಲಬಾರಿಗೆ 2000ನೇ ಇಸವಿಯಲ್ಲಿ ಸುಮಾರು 33 ಕೋಟಿ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದ್ದರು. ತದನಂತರ ಅಲ್ಲಿ ಯಾವುದೇ ರೀತಿಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಆಗಲಿಲ್ಲ. ಕೇವಲ 8 ಕೋಟಿ ರೂ. ಕೆಲಸ ಮಾತ್ರ ಆಗಿತ್ತು. ಅದರಿಂದ ಯಾವುದೇ ಪ್ರಯೋಜನ ಆ ರೈತರಿಗೂ, ನಾಲೆಗೂ ಆಗಲಿಲ್ಲ. 2006–07 ರಲ್ಲಿ ತಾವು ಹೇಳಿದಂತೆ ವಿಶೇಷವಾಗಿ ಉತ್ತರದ ನಾಲೆ 0 to 75 ಕಿಲೋಮೀಟರ್ ಕಾಮಗಾರಿಗಳು 70 ಕೋಟಿ. 75 ಕಿಲೋ ಮೀಟರ್‌ನಿಂದ 108 ಕಿಲೋಮೀಟರ್‌ವರೆಗಿನ ಕಾಮಗಾರಿಗೆ 38 ಕೋಟಿ, ದಕ್ಷಿಣ ನಾಲಾ ಕಾಮಗಾರಿ 0 to 44 ಕಿಲೋಮೀಟರ್ ಕಾಮಗಾರಿಗೆ 31 ಕೋಟಿ, ಈ ರೀತಿ ಒಟ್ಟು 139 ಕೋಟಿ ವೆಚ್ಚದ ಕಾಮಗಾರಿಯನ್ನು ಮಾಡಲಾಯಿತು. ಇದನ್ನು ಮಾಡುವ ಸಂದರ್ಭದಲ್ಲಿ ನಾಲೆಯ ನೀರಿನ ವೇಗ ಕಡಿಮೆಯಾಗುತ್ತದೆ, ನೀರಿನ ಕ್ಷಮತೆ ಹೆಚ್ಚು ಆಗುವುದಿಲ್ಲ, ಆದ್ದರಿಂದ ಮರು ವಿನ್ಯಾಸ ಮಾಡಬೇಕು, ಡಿಸೈನ್ ಸೈಜ್ ಏನು 12.5 ಮೀಟರ್ ಇತ್ತು ಅದನ್ನು

8 ಮೀಟರ್‌ಗೆ ಅಳವಡಿಸಿದರೆ ಮಾತ್ರ ವೆಲಾಸಿಟಿ ಬರುತ್ತದೆ ಎನ್ನುವ ಕಾರಣದಿಂದ ಆ ನಾಲೆಯೇನು ಪೂರ್ತಿ ತೆಗೆದಿದ್ದರು ಅದನ್ನು ಮತ್ತೆ deduction ಮಾಡಿ, ಅಂದರೆ ನಾಲೆಯ actual size ಏನು ಇತ್ತು ಅದೇ size ಗೆ ನಾಲೆಯನ್ನು ಮಾಡಿದಂಥ ಸಂದರ್ಭದಲ್ಲಿ excavation ಮತ್ತೆ ಮತ್ತು ಅದರ sizing ಗೆ ಹೆಚ್ಚಿನ ಕಾಸ್ಟ್ ಆಗಿದೆ. ಮೊದಲು ಸ್ಟೀಲ್ ಇರಲಿಲ್ಲ ಅದನ್ನು ಅಳವಡಿಸಿದ್ದಾರೆ, ಎಸ್.ಆರ್. ದರಗಳಲ್ಲಿ ವ್ಯತ್ಯಾಸಗಳಾಗಿದೆ, ಮೊದಲ ಅಂದಾಜಿನಲ್ಲಿ favour lining ಇರಲಿಲ್ಲ. ಈಗ favour lining ನ್ನು ಉಪಯೋಗ ಮಾಡಿದ್ದಾರೆ. ಸರ್ವಿಸ್ ರಸ್ತೆಯನ್ನು ಹೆಚ್ಚು ಮಾಡಿದ್ದಾರೆ. ಇನ್ನೊಂದು ಬಹಳ ಮುಖ್ಯವಾಗಿರುವಂಥದ್ದು, ದಕ್ಷಿಣ ನಾಲೆ, ಮೊದಲಿನ ಕಾಮಗಾರಿಯಲ್ಲಿ ಇರಲಿಲ್ಲ. ಅನಂತರ 0 to 44 ಕಿಲೋಮೀಟರ್ 52 ಕೋಟಿ ರೂ. ಹೆಚ್ಚಿನ ಕಾಮಗಾರಿ ಆಯಿತು. ಇಲ್ಲಿ ಕಾಮಗಾರಿಯೇ ಹೆಚ್ಚುವರಿ ಆಯಿತು. ಈ ಎಲ್ಲಾ ಕಾರಣಗಳಿಂದ 212.84 ಕೋಟಿಗೆ ಹೆಚ್ಚಾಗಿದೆ. ಈ ರೀತಿ ಹಳೆಯ ನಾಲೆಗಳನ್ನು ಮಾಡುವಂಥ ಸಂದರ್ಭದಲ್ಲಿ ಸ್ಥಳೀಯ ಸ್ಥಿತಿಗತಿಗಳು, ಮೊದಲು ಇದ್ದಂಥ ಡಿಸೈನ್‌ಗಳ ವ್ಯತ್ಯಾಸದಿಂದ ಈ ರೀತಿ ಹೆಚ್ಚು ಆಗುವ ಸಂಭವವಿದೆ. ಒಂದು ಏನೆಂದರೆ, ಅದನ್ನು ಈಗ ಪೂರ್ಣ ಮಾಡಿದ್ದು ಅದು ಸುಮಾರು 108 ಕಿಲೋಮೀಟರ್ ಉದ್ದ ಇದೆ, ಅದರ ವ್ಯಾಪ್ತಿ ಕಡಿಮೆ ಇದ್ದರೂ ಉದ್ದ ಜಾಸ್ತಿ ಇದೆ. ಆದ್ದರಿಂದ ಕಾಸ್ಟ್ ಜಾಸ್ತಿಯಾಗಿದೆ. ಈಗ ಎಲ್ಲಾ ಕಾಮಗಾರಿ ಮುಗಿದಿದ್ದು ಎರಡು ಮೂರು ತಾಲ್ಲೂಕುಗಳ ರೈತರುಗಳಿಗೆ ನೀರನ್ನು ಒದಗಿಸಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ: ನನ್ನ ಪ್ರಶ್ನೆ ಅದಲ್ಲ. ಕಾಮಗಾರಿ ಚೆನ್ನಾಗಿ ಆಗಬೇಕು, ಅದು ಹಳೆಯ ಕೆಲಸ ಎಂಬ ತಮ್ಮ ಮಾತನ್ನು ಒಪ್ಪುತ್ತೇನೆ. ನನ್ನ ಪ್ರಶ್ನೆ ಏನೆಂದರೆ ತಾಂತ್ರಿಕ ಸಮಿತಿಯವರು ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟ ಕೇವಲ 4 ತಿಂಗಳಿಗೇ ಬದಲಾವಣೆ ಮಾಡುತ್ತೀರಲ್ಲಾ ತಾಂತ್ರಿಕ ಸಮಿತಿಯವರು ಮೊದಲೇನು ಕಣ್ಣುಮುಚ್ಚಿಕೊಂಡು ಕುಳಿತಿದ್ದರೆ? ಆವತ್ತೇ ಯೋಚನೆ ಮಾಡಬೇಕಾಗಿತ್ತು. ನೀವು ಯಾವ ರೀತಿಯಾಗಿ ನೀರಾವರಿ ನಿಗಮದಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದೀರಿ ಎನ್ನುವಂಥದ್ದು. ಈಗ ಇದು ನಿಮ್ಮ

ಗಮನಕ್ಕೆ ಬಂದಿದೆ. ಇದು ನಿಮಗೆ ಹಳೆಯ ವಿಚಾರ ಇರಬಹುದು, ನಿಮಗೆ ಗೊತ್ತಿಲ್ಲದೇ ಇರಬಹುದು. ಏಕೆಂದರೆ ಇದು extra financial implications ಆಗತಕ್ಕದ್ದು ಇದೊಂದೇ ಯೋಜನೆಯಲ್ಲ. ನನ್ನ ಹತ್ತಿರ ಎಲ್ಲಾ ಮಾಹಿತಿ ಇದೆ. ಒಂದು ವರ್ಷಕ್ಕೆ 400 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಖರ್ಚು ಮಾಡುತ್ತಿದ್ದೀರಿ. ಕೇವಲ ಕಾವೇರಿ ನಿಗಮದಲ್ಲಿ ಮಾತ್ರವಲ್ಲ ಕೃಷ್ಣ ಭಾಗ್ಯ ಜಲ ನಿಗಮದಲ್ಲೂ ಇದು ಆಗುತ್ತಿದೆ. ಈ ರೀತಿ ಸ್ವೇಚ್ಚಯಾಗಿ extra financial implications ನ್ನು ಡಿಸೈನ್ ಸರಿಯಿಲ್ಲ, ಅದು ಸರಿಯಿಲ್ಲ, ಇದು ಸರಿಯಿಲ್ಲ, ರೇಟ್ ಜಾಸ್ತಿಯಾಯಿತು ಎಂದು ಕಾರಣ ಕೊಡುವುದರಲ್ಲಿ ಅರ್ಥವಿಲ್ಲ. ನೀವು ಜಲಕ್ರಾಂತಿಯನ್ನು ಮಾಡುತ್ತಿದ್ದೀರಿ. Modernization schemesನ್ನು ಮಾಡುತ್ತಿದ್ದೀರಿ, ಇದೇ ರೀತಿ ನೀವು ಸ್ವೇಚ್ಚೆಯಾಗಿ ಹಣವನ್ನು ಖರ್ಚು ಮಾಡಿದರೆ ಯೋಜನೆಗಳನ್ನು ಯಾವಾಗ ಮುಗಿಸುತ್ತೀರಿ? ನಾಲ್ಕು ತಿಂಗಳಿಗೇ ವ್ಯತ್ಯಾಸವನ್ನು ಮಾಡಿದಾಗ ಅನುಮಾನ ಬರುತ್ತದೋ ಇಲ್ಲವೋ ಹೇಳಿ. ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲದೆ ಮಾತನಾಡುತ್ತಿಲ್ಲ. ನನ್ನ ಹತ್ತಿರ ಎಲ್ಲಾ ಮಾಹಿತಿ ಇದೆ. ಸಂದರ್ಭ ಬಂದರೆ ನಾನು ತೋರಿಸಲೂ ತಯಾರಾಗಿದ್ದೇನೆ. Works slip approve ಆಗಿದೆಯೋ ದಯಮಾಡಿ ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ನೀರಾವರಿ ಯೋಜನೆಯೇ ಆಗಲಿ ಯಾವುದೇ constructions ಆಗಲಿ...

ಅಧ್ಯಕ್ಷರು: ಇದರಲ್ಲಿ ಬಹಳ ಇಶ್ಯೂಸ್ ಇದೆ. ಆದ್ದರಿಂದ ಇದರ ಬಗ್ಗೆ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಲು ಇನ್ನೊಂದು ದಿವಸ ಅವಕಾಶ ಕೊಡುತ್ತೇನೆ. ಆಗ ವಿವರವಾಗಿ ಚರ್ಚೆ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ: ಇದು ನನ್ನ ಕ್ಷೇತ್ರದಲ್ಲೇ ಬರುವುದು. ಪುಟ್ಟೇಗೌಡರು, ನಮಗೆ ಮತ್ತು ಕೆ.ಆರ್.ಪೇಟೆ ಮೂರು ತಾಲ್ಲೂಕಿಗೆ ಬರುತ್ತದೆ. ಜಯಚಂದ್ರರವರು ಒಂದು ದಿವಸ ದಯಮಾಡಿ ಬರಬೇಕು. 136 ವರ್ಷದ ಹಿಂದಿನ ನಾಲೆ ಇತ್ತು. 2000 ಇಸವಿಯಲ್ಲಿ ಹಿಂದಿನ ಸರ್ಕಾರವಿದ್ದಾಗ ಫೌಂಡೇಷನ್ ಹಾಕಿ ಸುಮ್ಮನೆ ಬಿದ್ದಿತ್ತು. ಅಲ್ಲಿ ಬ್ರಿಡ್ಜಸ್‌ಗಳೇ ಇರಲಿಲ್ಲ.

ಅಧ್ಯಕ್ಷರು: ಅಲ್ಲಿ ವಿವರವಾಗಿ ಚರ್ಚೆ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ: ಚರ್ಚೆ ಮಾಡುವುದಾದರೆ ಕಾವೇರಿ ನಿಗಮ ಮಾತ್ರವಲ್ಲ, ಇಡೀ ನೀರಾವರಿ ನಿಗಮದ ಬಗ್ಗೆ ಚರ್ಚೆ ಮಾಡೋಣ. ಇದನ್ನು ತೆಗೆದುಕೊಂಡು ಸುಮ್ಮಸುಮ್ಮನೆ 69 ರಲ್ಲಿ ಚರ್ಚೆಮಾಡೋಣವೆಂದಲ್ಲ. ಅವರು ಪಿಎಸಿ ಯಲ್ಲಿ ಮಾಹಿತಿ ತರಿಸಿ ಎಲ್ಲವನ್ನೂ ನೋಡಿದ್ದಾರೆ. ದಯಮಾಡಿ ನೀರಾವರಿ ಮಂತ್ರಿಗಳು ಕೆಲಸವನ್ನು ಚೆನ್ನಾಗಿ ಮಾಡಿಸಿದ್ದಾರೆ.

ಅಧ್ಯಕ್ಷರು: ಒಂದೇ ವರ್ಷದಲ್ಲಿ 400 ಕೋಟಿ ಹೆಚ್ಚುವರಿಯಾಗಿ ಖರ್ಚು ಮಾಡಿದ್ದಾರೆ, ಅದು ಹೇಗೆ ಆಯಿತು ಎಂದು ಅವರು ಹೇಳಿದ್ದು.

ಶ್ರೀ ಟಿ.ಬಿ. ಜಯಚಂದ್ರ: ನೀವು ಅವರ ಬಗ್ಗೆ ಏನಾದರು ಕನಿಕರ ತೋರಿಸುವುದಾದರೆ..

ಶ್ರೀ ಬಸವರಾಜ ಬೊಮ್ಮಾಯಿ: ಸರ್ಕಾರದಿಂದ ಕ್ಲಾರಿಫಿಕೇಷನ್ ಕೊಡುತ್ತೇನೆ. ಈ ವಿಚಾರದಲ್ಲಿ ಎರಡು ವಿಚಾರಗಳನ್ನು ಹೇಳಿದ್ದೀರಿ. Financial implicationsನ್ನು ಹೆಚ್ಚು ಮಾಡಿಕೊಂಡು ಹೋಗುತ್ತಿದ್ದೀರೆಂದು ಹೇಳಿದ್ದೀರಿ. ಒಂದು ವಿಚಾರವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಈ ಸರ್ಕಾರ ಬರುವುದಕ್ಕಿಂತ ಮೊದಲು financial implications ಎಷ್ಟು ಇತ್ತು, ಈ ಸರ್ಕಾರ ಬಂದ ಮೇಲೆ ಎಷ್ಟು ಕಡಿಮೆಯಾಗಿದೆ, ನಾನು ಅಧಿಕಾರಕ್ಕೆ ಬಂದ ತಕ್ಷಣವೇ ಸರ್ಕಾರದ ಗೈಡ್‌ಲೈನ್ಸ್ ಇರುವ ಒಂದು ಜಿ.ಒ.ವನ್ನು ಮಾಡಿ ಈ ಹಿಂದೆ ಏನು 10% financial implications ಆಗುತ್ತಿತ್ತು ಈಗ ಅದು 5% ಗಿಂತ ಕಡಿಮೆ ಆಗುತ್ತಿದೆ. That is the achievement of this government. ಈ ಮೊದಲು financial implications 300 ಕೋಟಿ ಇದ್ದದ್ದು ಈಗ 28–30 ಕೋಟಿಗೆ ಬಂದಿದೆ. ಅಷ್ಟು ಕಂಟ್ರೋಲ್ ಮಾಡಿದ್ದೇವೆ. That is the achievement of this government. ನೀವು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ. ಇಲ್ಲದಿದ್ದರೆ ನಾನು ಎಂದೂ ನನ್ನ ಸಾಧನೆಯನ್ನು ಹೇಳಿಕೊಂಡಿಲ್ಲ. ಪ್ರಾಸಂಗಿಕವಾಗಿ ಹೇಳುತ್ತಿದ್ದೇನಷ್ಟೆ. ಎರಡನೆಯದಾಗಿ, ಈ modernization ಮಾಡುವಂಥ ಸಂದರ್ಭದಲ್ಲಿ ಅದೂ ವಿಶೇಷವಾಗಿ ಹಳೆಯ ನಾಲೆಗಳನ್ನು ಮಾಡುವಂಥ ಸಂದರ್ಭದಲ್ಲಿ concept and creationನಲ್ಲಿ ವ್ಯತ್ಯಾಸ ಇರುತ್ತದೆ. ನಾವು ಡಿಸೈನ್ ಮಾಡಿದಾಗ actual geological

ಸರ್ವೆಯನ್ನು ನೋಡಿದಾಗ, ಹಿಂದಿನ ಸರ್ಕಾರ ಇವತ್ತಿನ ಸರ್ಕಾರವೆಂದಲ್ಲ, ಬರೇ ಜಲಸಂಪನ್ಮೂಲ ಇಲಾಖೆಯಲ್ಲ, ಬೇರೆ ಬೇರೆ ಇಲಾಖೆಯಲ್ಲೂ cost escalations ಆಗಿದೆ, constructions ನಲ್ಲೂ ಆಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳಬೇಕಾದರೆ, ಖಂಡಿತವಾಗಿ ನೀವು ನನ್ನ ಗಮನವನ್ನು ಸೆಳೆದಿದ್ದೀರಿ, ಆದರೆ ನಾನು ಎಲ್ಲವನ್ನು ನೋಡಿದಾಗ ಟಿಎಸ್‌ಸಿ ಯಲ್ಲಿ ಅಪ್ರೂವ್ ಆಗಿ, ಬೋರ್ಡ್‌ನಲ್ಲಿ ಅಪ್ರೂವ್ ಆಗಿ, finance ಗೆ ಹೋಗಿ, ಕ್ಯಾಬಿನೇಟ್‌ನಲ್ಲಿ ಅಪ್ರೂವ್ ಆಗಿ ಕೆಲಸಗಳು ಆಗಿದ್ದಾವೆ. ಆದ್ದರಿಂದ ಇಲ್ಲಿ ಮುಚ್ಚುಮರೆ ಮಾಡುವಂಥದ್ದು ಏನೂ ಇಲ್ಲ. ಇಷ್ಟಕ್ಕೂ ನಿಮಗೆ ಸಮಾಧಾನವಾಗದಿದ್ದರೆ ಮಾನ್ಯ ಅಧ್ಯಕ್ಷರ ಕೊಠಡಿಯಲ್ಲೋ, ನನ್ನ ಕಚೇರಿಯ ಕೊಠಡಿಯಲ್ಲೋ ಬನ್ನಿ ಎಲ್ಲಾ ದಾಖಲೆಗಳನ್ನು ನಾವು ನೀವು ಕೂಡಿ ನೋಡೋಣ. ಅದಕ್ಕೂ ಮೀರಿ ಏನಾದರು ಇದ್ದರೆ I am ready for anything. ನಾನು ಈ ಸಂಬಂಧ ಎಲ್ಲಾ ದಾಖಲೆಗಳನ್ನು ನಿಮ್ಮ ಮುಂದೆ ತಂದು ಇಡಲು ತಯಾರಿದ್ದೇನೆ. ರೇವಣ್ಣನವರೂ ಬನ್ನಿ ನೀವೂ ಬನ್ನಿ.

ಶ್ರೀ ಟಿ.ಬಿ. ಜಯಚಂದ್ರ: ಇದು ಕೇವಲ ಒಂದು ಸ್ಯಾಂಪಲ್ ಕೇಸು. 350–400 ಕೋಟಿ ವೆಚ್ಚವನ್ನು ಬೇರೆ ಬೇರೆ ಯೋಜನೆಗಳಲ್ಲಿ ಮಾಡುತ್ತಿದ್ದೀರಲ್ಲಾ ಅದಕ್ಕೆ ಕಡಿವಾಣವನ್ನು ಹಾಕಲು ಇದು ಒಂದು ನಿದರ್ಶನವಾಗುತ್ತದೆ. ಆ ಕಾರಣಕ್ಕೋಸ್ಕರ ನಿಮ್ಮ ಹತ್ತಿರ ಏನು ಇದೆ ತರಿಸಿ, ನಮ್ಮ ಹತ್ತಿರ ಇರುವ ದಾಖಲೆಗಳನ್ನೂ ಕೊಡುತ್ತೇನೆ. ವ್ಯತ್ಯಾಸ ಆಗಿದೆಯೋ ಇಲ್ಲವೋ ಎಂಬುದನ್ನು ನೋಡೋಣ.

ಶ್ರೀ ಬಸವರಾಜ ಬೊಮ್ಮಾಯಿ: ನಿಮ್ಮ ಹತ್ತಿರ ಇರುವ ದಾಖಲೆಯನ್ನೂ ತೆಗೆದುಕೊಂಡು ಬನ್ನಿ. ನಮ್ಮ ಕಡೆ ಇರುವ ದಾಖಲೆಗಳನ್ನೂ ನೋಡಿ. ಅನಂತರ ತೀರ್ಮಾನ ಮಾಡೋಣ. I am ready.

ಶ್ರೀ ಟಿ.ಬಿ. ಜಯಚಂದ್ರ: ನೀವು ಬಂದ ಮೇಲೆ 300–400 ಕೋಟಿಯಿಂದ 28 ಕೋಟಿಗೆ ಬಂದಿದೆಯೆಂದು ಹೇಳಿದ್ದೀರಿ. ಆ ವಿಚಾರದ ಬಗ್ಗೆಯೂ ಚರ್ಚೆ ಮಾಡೋಣ.

ಶ್ರೀ ಬಸವರಾಜ್ ಬೊಮ್ಮಾಯಿ: ಖಂಡಿತವಾಗಿಯೂ.

ಶ್ರೀ ಟಿ.ಬಿ. ಜಯಚಂದ್ರ: ನಿಮ್ಮ ದೃಷಿ ರೈತರ ಮೇಲಿರಲಿ. ಗುತ್ತಿಗೆದಾರರ ಮೇಲೆ ಇರಬಾರದು.

ಶ್ರೀ ಬಸವರಾಜ್ ಬೊಮ್ಮಾಯಿ: ಈ ಸರ್ಕಾರದ ದೃಷ್ಟಿ ರೈತರ ಮೇಲೆ ಇರುವುದರಿಂದಲೇ ಈ ಕಾಮಗಾರಿಗಳನ್ನು ತೆಗೆದುಕೊಂಡಿರುವುದು. ಹಿಂದೆ ಮಹಾರಾಜರ ಕಾಲದ್ದನ್ನು ಏಕೆ ಮುಟ್ಟಲಿಲ್ಲ? ರೈತರ ರಕ್ಷಣೆ ಮಾಡುವ ಸಲುವಾಗಿಯೇ ನಾವು ಇವತ್ತು ಇದನ್ನು ಮಾಡುತ್ತಿರುವುದು. ಇದನ್ನು ಮಾಡುತ್ತಿರುವ ಸಂದರ್ಭದಲ್ಲಿ ಯಾವುದೇ ರೀತಿಯ cost escalation ಆಗಿಲ್ಲ. ಇದನ್ನು ಸರ್ಕಾರ ಸಹಿಸುವುದಿಲ್ಲ. ಆ ಎಲ್ಲಾ ಮಾಹಿತಿಗಳನ್ನು ನಿಮ್ಮ ಮುಂದೆ ಇಡಲು ತಯಾರಿದ್ದೇನೆ. ಅನಂತರ ನೀವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ಅದಕ್ಕೆ ನಾನು ಬದ್ಧನಾಗಿರುತ್ತೇನೆ.

3) ವಿಷಯ:–ಜಿಗಣಿ ಪ್ರದೇಶವು ಹೆಚ್ಚಾಗಿ ಕೈಗಾರಿಕಾ ಪ್ರದೇಶವಾಗಿದ್ದು ಪ್ರತಿಷ್ಠಿತ ಕಂಪನಿಗಳನ್ನು ಹೊಂದಿದ್ದು ಈ ಪ್ರದೇಶವು ಬನ್ನೇರುಘಟ್ಟ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರಲಿದ್ದು ಈ ಪ್ರದೇಶಕ್ಕೆ ಪ್ರತ್ಯೇಕ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಬಗ್ಗೆ.

ಶ್ರೀ ಎಂ. ಕೃಷ್ಣಪ್ಪ: ಜಿಗಣಿ ಪ್ರದೇಶವು ಹೆಚ್ಚಾಗಿ ಕೈಗಾರಿಕಾ ಪ್ರದೇಶವಾಗಿದ್ದು ಪ್ರತಿಷ್ಠಿತ ಕಂಪನಿಗಳನ್ನು ಹೊಂದಿದ್ದು ಈ ಪ್ರದೇಶವು ಬನ್ನೇರುಘಟ್ಟ ಪೊಲೀಸ್‌ಠಾಣೆ ವ್ಯಾಪ್ತಿಯಲ್ಲಿ ಬರಲಿದ್ದು ಈ ಪ್ರದೇಶಕ್ಕೆ ಪ್ರತ್ಯೇಕ ಪೊಲೀಸ್ ಠಾಣೆಯನ್ನು ಮಂಜೂರು ಮಾಡಬೇಕೆಂದು ಗೃಹ ಮತ್ತು ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 207 ಪಿಓಪಿ 2008, ದಿನಾಂಕ 10–2–2010ರಲ್ಲಿ 2010–11ನೇ ಸಾಲಿನಲ್ಲಿ ಹೊಸ 7 ಪೊಲೀಸ್ ಠಾಣೆಗಳು, 8 ಸಂಚಾರಿ ಪೊಲೀಸ್ ಠಾಣೆಗಳು ಹಾಗೂ 10 ಪೊಲೀಸ್ ಉಪ ಠಾಣೆಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ. ಈ ಒಟ್ಟು 25 ಪೊಲೀಸ್ ಠಾಣೆಗಳಿಗೆ ತಗಲುವ ಆವರ್ತಕ ವೆಚ್ಚವು ರೂ. 16,49,49,128/– ಆಗಿರುತ್ತದೆ. ಮುಂದುವರೆದು, ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 331 ಪಿಓಪಿ 2009, ದಿನಾಂ 11–2–2010ರಲ್ಲಿ ಶಿವಮೊಗ್ಗ